ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

**ಸಂಖ್ಯೆ: ಕಸಂವಿ/01/ಎಂ.ಫಿಲ್/2015–16** **ದಿನಾಂಕ: 17.06.2015**

# ಅಧಿಸೂಚನೆ

2015–16ನೇ ಸಾಲಿನ ಶೈಕ್ಷಣಿಕ ಅವಧಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಂ.ಫಿಲ್ (ವಿಶಿಷ್ಟಾಚಾರ್ಯ) ಉಪಾಧಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆವೇದನಪತ್ರವನ್ನು ಆಹ್ವಾನಿಸಲಾಗಿದೆ. ಸಂಸ್ಕೃತ/ಶಾಸ್ತ್ರದ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ. 55 ಅಂಕಗಳನ್ನು ಪಡೆದಿರುವವರು ಅರ್ಹರಾಗಿರುತ್ತಾರೆ. (ಪ.ಜಾ / ಪ. ಪಂ. ಹಾಗೂ ಪ್ರವರ್ಗ1ರ ಅಭ್ಯರ್ಥಿಗಳಿಗೆ ಶೇ. 50). ಸ್ನಾತಕೋತ್ತರ ಪದವಿಯ ಅಂತಿಮ ವರ್ಷ/ಸೆಮಿಸ್ಟರ್ ಪರೀಕ್ಷೆ ಬರೆಯುತ್ತಿರುವ ಅಥವಾ ಫಲಿಂತಾಂಶದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳೂ ಸಹ ಅರ್ಜಿ ಸಲ್ಲಿಸಬಹುದು. ಆವೇದನ ಪತ್ರ ಮತ್ತು ಪ್ರವೇಶ ಪರೀಕ್ಷಾ ಶುಲ್ಕವನ್ನು **ಹಣಕಾಸು ಅಧಿಕಾರಿಗಳು,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು – ಈ ಹೆಸರಿನಲ್ಲಿ ಡಿಡಿ ತೆಗೆದು ಸಲ್ಲಿಸುವುದು.

**ಆವೇದನ ಪತ್ರವನ್ನು ಸಲ್ಲಿಸಲು ಕೊನೆಯ ದಿನಾಂಕ: 17.07.2015**

ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ **'ನಿರ್ದೇಶಕರು, ಸಂಶೋಧನೆ ಮತ್ತು ಸ್ನಾತಕೋತ್ತರ ಅಧ್ಯಯನ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–560018'** ಇವರ ಕಛೇರಿಯನ್ನು (ದೂ: 080–26705387) ಸಂಪರ್ಕಿಸಬಹುದು ಅಥವಾ ವಿಶ್ವವಿದ್ಯಾಲಯದ ಜಾಲತಾಣ **www.ksu.ac.in**ನಲ್ಲಿ ವಿವರಗಳನ್ನು ಪಡೆಯಬಹುದು.

**ಸಹಿ/-**
**ಕುಲಸಚಿವರು**

**ಪ್ರತಿಗಳು:**

1. **ಘನತೆವೆತ್ತ ಕುಲಾಧಿಪತಿಗಳ ಪ್ರಧಾನ ಕಾರ್ಯದರ್ಶಿಗಳು,** ರಾಜಭವನ, ಬೆಂಗಳೂರು–01 – ಮಾಹಿತಿಗಾಗಿ.
2. **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ), 7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–01
3. **ಎಲ್ಲಾ ಶಾಸನಬದ್ಧ ಪ್ರಾಧಿಕಾರದ ಸದಸ್ಯರು,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
4. **ಡೀನ್ (ಭಾಷಾ, ಶಾಸ್ತ್ರ, ವೇದಾಂತ ನಿಕಾಯ),** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
5. **ಮಾನ್ಯ ಕುಲಪತಿಗಳ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
6. ಹಣಕಾಸು ಅಧಿಕಾರಿಗಳು,
7. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜಾಲತಾಣ ಮತ್ತು ಸೂಚನಾ ಫಲಕಗಳು
8. ಘಟಕ ಕಾಲೇಜುಗಳು/ಸಂಯೋಜಿತ ಕಾಲೇಜುಗಳು/ಮಾನಿತ ಸಂಶೋಧನ ಕೇಂದ್ರಗಳು
9. ಕಛೇರಿ ಪ್ರತಿ
10. ರಕ್ಷತಾ ಪ್ರತಿ

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

# ಎಂ.ಫಿಲ್. (ವಿಶಿಷ್ಟಾಚಾರ್ಯ) ಪ್ರವೇಶ ಪ್ರಕ್ರಿಯೆಯ ವೇಳಾಪಟ್ಟಿ

| ಕ್ರ.ಸಂ. | ವಿವರ | ಅವಧಿ/ದಿನಾಂಕ |
|---|---|---|
| 1. | ಆವೇದನ ಪತ್ರ ಸಲ್ಲಿಸಲು ಕೊನೆಯ ದಿನಾಂಕ | 17.07.2015 |
| 2. | ಪ್ರವೇಶ ಪರೀಕ್ಷೆ ಬರೆಯಲು ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣಾ ದಿನಾಂಕ[1]** | 24.07.2015 |
| 3. | ಪ್ರವೇಶ ಪರೀಕ್ಷೆ ದಿನಾಂಕ | 30.07.2015 |
| 4. | ಮೌಖಿಕ ಪರೀಕ್ಷೆ | 30.07.2015 ಮತ್ತು 31.07.2015. |
| 5. | ಫಲಿತಾಂಶ ದಿನಾಂಕ (ಕೋರ್ಸ್‌ವರ್ಕಗೆ ಆಯ್ಕೆಯಾದವರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ) | 10.08.2015 |
| 6. | ನೋಂದಣಿಗೆ ಕೊನೆಯ ದಿನಾಂಕ | 20.08.2015 |
| 7. | ದ್ವಿತೀಯ ಪಟ್ಟಿ | 24.08.2015 |
| 8. | ತರಗತಿ ಪ್ರಾರಂಭ ದಿನಾಂಕ | 01.09.2015 |
| 9. | ವಾರ್ಷಿಕ ಪರೀಕ್ಷೆ | 16.03.2016ರಿಂದ 18.03.2016ರವರೆಗೆ |
| 10. | ಎಂ.ಫಿಲ್ ಪ್ರಬಂಧ ಸಮರ್ಪಣಾ ದಿನಾಂಕ | ಜುಲೈ 2016 |

---

[1] ** ಆಯ್ಕೆ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಯಾವುದೇ ಬಗೆಯ ಪತ್ರ/ಸೂಚನೆಗಳನ್ನು ವೈಯುಕ್ತಿಕವಾಗಿ ವಿಶ್ವವಿದ್ಯಾಲಯದ ವತಿಯಿಂದ ಕಳುಹಿಸಲಾಗುವುದಿಲ್ಲ. ಹೀಗಾಗಿ ಅಭ್ಯರ್ಥಿಗಳು ನಿಗದಿತ ದಿನಾಂಕಗಳಂದು ಕ.ಸಂ.ವಿಯ ಜಾಲತಾಣದಲ್ಲಿ ಮಾಹಿತಿಗಳನ್ನು ಪಡೆಯುವುದು – **www.ksu.ac.in**

# ಶುಲ್ಕ ವಿವರ

| ಕ್ರಸಂ | ಶುಲ್ಕವಿವರ | ಮೊತ್ತ |
|---|---|---|
| 1 | ಅರ್ಜಿ ಮತ್ತು ಪ್ರವೇಶ ಪರೀಕ್ಷಾ ಶುಲ್ಕ | 500.00 |
| 2 | ಅರ್ಜಿ ಶುಲ್ಕ (ಪ್ರವೇಶ ಪರೀಕ್ಷೆ ವಿನಾಯಿತಿ ಇರುವವರಿಗೆ) | 300.00 |
| 3 | ನೋಂದಣಿ ಶುಲ್ಕ | 1500.00 |
| 4 | ಬೋಧನಾ (ಕೋರ್ಸ್‌ವರ್ಕ್) ಶುಲ್ಕ | 1500.00 |
| 5 | ಕೋರ್ಸ್‌ವರ್ಕ್ ಪರೀಕ್ಷಾ ಶುಲ್ಕ | 500.00 |
| 6 | ಪುನರ್ ಮೌಲ್ಯಮಾಪನ ಶುಲ್ಕ (ಪ್ರತಿ ಪತ್ರಿಕೆಗೆ) | 500.00 |
| 7 | ಗ್ರಂಥಾಲಯ ಶುಲ್ಕ | 500.00 |
| 8 | ಶೋಧ ಪ್ರಬಂಧ ಸಮರ್ಪಣೆ & ಪರೀಕ್ಷಾ ಶುಲ್ಕ | 500.00 |
| 9 | ಘಟಿಕೋತ್ಸವ ಪ್ರಮಾಣ ಪತ್ರ<br>(ಕನ್ನಡ ಮತ್ತು ಇಂಗ್ಲಿಷ್) | 500.00 |

- ಸರ್ಕಾರದ ನಿಯಮಗಳಂತೆ ಮೀಸಲಾತಿ ಸೌಲಭ್ಯ ಹೊಂದಿರುವ ಅಭ್ಯರ್ಥಿಗಳಿಗೆ 50% ರಷ್ಟು ಶುಲ್ಕ ವಿನಾಯಿತಿ ಇರುತ್ತದೆ.

**ಹೆಚ್ಚಿನ ಮಾಹಿತಿಗಳಿಗೆ ಸಂಪರ್ಕಿಸಿ:**

**ಡಾ. ಶರತ್‌ಚಂದ್ರ ಸ್ವಾಮಿ,**
ಸಹಾಯಕ ಪ್ರಾಧ್ಯಾಪಕರು & ಸಂಯೋಜಕರು
(ಎಂ.ಫಿಲ್–ವಿಶಿಷ್ಟಾಚಾರ್ಯ/ಪಿಎಚ್.ಡಿ–ವಿದ್ಯಾವಾರಿಧಿ & ಡಿ.ಲಿಟ್)
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ
ಬೆಂಗಳೂರು–18
ದೂ: 9900128882
Email: scswamy@gmail.com

# ವಿದ್ಯಾರ್ಥಿಗಳಿಗೆ ಸೂಚನೆಗಳು

1. ಅಭ್ಯರ್ಥಿಯು 3 ಪಾಸ್‌ಪೋರ್ಟ್ ಆಕಾರದ ಭಾವಚಿತ್ರಗಳನ್ನು ಸಲ್ಲಿಸಬೇಕು (ಭಾವ ಚಿತ್ರದ ಹಿಂದೆ ಅಭ್ಯರ್ಥಿಯ ಪೂರ್ಣ ಹೆಸರನ್ನು ಬರೆದಿರಬೇಕು.)

2. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಎಂ.ಫಿಲ್ ಸಂಯುಕ್ತ ಪಿಎಚ್.ಡಿ ಪದವಿಯನ್ನು 2014-15 ನೇ ಸಾಲಿನಿಂದ ಜಾರಿಗೆ ತಂದಿದ್ದು, ಇದರನ್ವಯ ಸ್ಥಾನಗಳಿಸಿದ ಅಭ್ಯರ್ಥಿಗಳು ತಮ್ಮ ಎಂ.ಫಿಲ್ ಪದವಿಯ ಅಧ್ಯಯನದ ಮುಕ್ತಾಯದ ನಂತರ ಕಸಂವಿಯಲ್ಲಿ ಪಿಎಚ್.ಡಿ ಪದವಿಗೆ ಸ್ಥಾನಗಳಿಸುತ್ತಾರೆ. ಒಟ್ಟು 7 ಸ್ಥಾನಗಳು ಮಾತ್ರ ಇದಕ್ಕಾಗಿ ನಿಗದಿಯಾಗಿದ್ದು, ಸ್ಥಾನಗಳನ್ನು ಅಭ್ಯರ್ಥಿಗಳ ಅರ್ಹತೆಗಳಿಗನುಗುಣವಾಗಿ ಹಂಚಲಾಗುತ್ತದೆ.

3. NET/SLET/JRF/GATE/GRE ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ.

4. ಮೊದಲು ನಿಗದಿತ ಅರ್ಜಿ ಮತ್ತು ಪ್ರವೇಶ ಪರೀಕ್ಷಾ ಶುಲ್ಕ 500/- (ಸಾಮಾನ್ಯ), ರೂ.250/- (ಪ.ಜಾ, ಪ.ವ, ಮತ್ತು ಪ್ರವರ್ಗ.I) ಡಿಡಿಯನ್ನು "ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು" (**The Finance officer, Karnataka Samskrit University, payable at Bangalore"**) ಇವರ ಹೆಸರಿನಲ್ಲಿ ತೆಗೆದು ಸಲ್ಲಿಸಬೇಕು. ಉಳಿದ ಶುಲ್ಕವನ್ನು ಕಾಲಕಾಲಕ್ಕೆ ಸಲ್ಲಿಸಬೇಕು.

5. ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು ನಿಗದಿತ ಅರ್ಜಿ ಶುಲ್ಕ 300 (ಸಾಮಾನ್ಯ), ರೂ.150/- (ಪ.ಜಾ, ಪ.ವ, ಮತ್ತು ಪ್ರವರ್ಗ.I) ಡಿಡಿಯನ್ನು "ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು" (**The Finance officer, Karnataka Samskrit University, payable at Bangalore"**) ಇವರ ಹೆಸರಿನಲ್ಲಿ ತೆಗೆದು ಸಲ್ಲಿಸಬೇಕು. ಉಳಿದ ಶುಲ್ಕವನ್ನು ಕಾಲಕಾಲಕ್ಕೆ ಸಲ್ಲಿಸಬೇಕು.

6. ಸ್ನಾತಕೋತ್ತರ ಪದವಿಯ ಅಂತಿಮ ವರ್ಷ/ಸೆಮಿಸ್ಟರ್ ನ ಪರೀಕ್ಷೆ ಬರೆಯುತ್ತಿರುವ ಅಥವಾ ಫಲಿಂತಾಂಶದ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳೂ ಸಹ ಅರ್ಜಿ ಸಲ್ಲಿಸಬಹುದು. ಆದರೆ, ಸ್ನಾತಕೋತ್ತರ ಪದವಿಯಲ್ಲಿ ಅವರು ಯಶಸ್ವಿಯಾದ ನಂತರವೇ ಅವರನ್ನು ನೋಂದಾಯಿಸಿಕೊಳ್ಳಲಾಗುತ್ತದೆ.

7. ಉದ್ಯೋಗದಲ್ಲಿರುವ ಅಭ್ಯರ್ಥಿಗಳು ಆರು ತಿಂಗಳ ಪೂರ್ಣಕಾಲಿಕ ಕೋರ್ಸ್ ವರ್ಕ್‌ನಲ್ಲಿ ಭಾಗವಹಿಸಲು ಅನುಮತಿ ನೀಡುವ ಸಂಬಂಧ ಮುಂಚಿತವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸಬೇಕು.

8. ಆಯ್ಕೆಯಾದ ವಿದ್ಯಾರ್ಥಿಗಳು ಮೂಲ ಅಂಕಪಟ್ಟಿಗಳನ್ನು ಮತ್ತು ಪ್ರಮಾಣ ಪತ್ರಗಳನ್ನು ಪರಿಶೀಲನೆಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು.

9. ಅಭ್ಯರ್ಥಿಗಳು ಆರು ತಿಂಗಳಕಾಲ ಕೋರ್ಸ‌ವರ್ಕನಲ್ಲಿ ಪೂರ್ಣಾವಧಿ ಭಾಗವಹಿಸುವ ಬಗ್ಗೆ ಮುಚ್ಚಳಿಕೆ ಪತ್ರವನ್ನು ನೀಡಬೇಕು.

10. **ಎಂ.ಫಿಲ್. ತರಗತಿಗಳಿಗೆ ಆಯ್ಕೆಯಾದ ಮತ್ತು ಸರ್ಕಾರಿ/ಖಾಯಂ ನೌಕರಿಯಲ್ಲಿಲ್ಲದ ವಿದ್ಯಾರ್ಥಿಗಳಿಗೆ ಕೋರ್ಸವರ್ಕ ಸಂದರ್ಭದಲ್ಲಿ ಪ್ರತಿ ತಿಂಗಳು ರೂ. 2000/- ವಿದ್ಯಾರ್ಥಿವೇತನವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ನೀಡುತ್ತದೆ (ಗರಿಷ್ಠ 15 ವಿದ್ಯಾರ್ಥಿಗಳಿಗೆ ಮಾತ್ರ).**

11. ಉಪಲಭ್ಯ ಸ್ಥಾನಗಳನ್ನು ತುಂಬುವ ಮತ್ತು ಬದಲಾವಣೆಗಳನ್ನು ಮಾಡುವ ಸಂಪೂರ್ಣ ಅಧಿಕಾರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕಿರುತ್ತದೆ.

12. ಪ್ರಸ್ತುತ ಸಾಲಿನ ಎಂ.ಫಿಲ್. ಪ್ರವೇಶ ಪರೀಕ್ಷೆಯ ಪಠ್ಯವನ್ನು (Syllabus) ಸದ್ಯದಲ್ಲಿಯೇ ಕಸಂವಿ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ.

13. ಎಂ.ಫಿಲ್. ಅರ್ಜಿಯನ್ನು ಕ.ಸಂ.ವಿ.ಯ ಈ ಕೆಳಗಿನ ಜಾಲತಾಣದಿಂದಲೂ ಡೌನ್ ಲೋಡ್ ಮಾಡಿಕೊಳ್ಳಬಹುದು –

    http://www.ksu.ac.in/en/m-phil-vishishtacharya-details/